ಶ್ರೀ ಬಿ. ಬಸವಲಿಂಗಪ್ಪ (ಗಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಪಶಸಂಗೋಪನೆ ಸಚಿವರು).—

ಎ) ೫೧೫

ಬಿ) ೩೬ ಪಜೆನ್ಸಿಗಳು

ಸಿ) ೨೨ (ಬೆಂಗಳೂರು ನಗರದಲ್ಲಿ)

ಡಿ) ಇಲ್ಲ.

ಗ್ರೈನ್ ಮರ್ಚೆಂಟ್ಸ್ ಸಹಕಾರ ಬ್ಯಾಂಕ್ ಬಗ್ಗೆ

೪೧೭. ಶ್ರೀ ಎಂ. ನಾರಾಯಣ ಸ್ವಾಮಿ (ಚೇತಮಂಗಲ),—ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಎ) ೮ನೇ ವಿಧಾನ ಸಭೆ ಅಧಿವೇಶನದಲ್ಲಿ ಸಹಕಾರ ಮಂತ್ರಿಗಳು ಗ್ರೈನ್ ಮರ್ಚೆಂಟ್ ಸಹಕಾರ ಬ್ಯಾಂಕ್ ನಿಯಮಿತ, ಬೆಂಗಳೂರು ಇದರಲ್ಲಿನ ನ್ಯೂನತೆಗಳ ಬಗ್ಗೆ ವಿಚಾರಣೆ ನಡೆಸಿ ಸೂಕ್ತ ಕ್ರಮ ತೆಗೆದುಕೊಳ್ಳುವ ಬಗ್ಗೆ ಆಶ್ವಾಸನೆ ಕೊಟ್ಟಿರುವುದು ಸತ್ಯಾಂಶವೇ ?

ಬಿ) ಹಾಗಿದ್ದಲ್ಲಿ ಅದು ಈಗ ಯಾವ ಮಟ್ಟದಲ್ಲಿದೆ ?

ಸಿ) ಈ ಬ್ಯಾಂಕಿನ ಆಡಳಿತ ಮಂಡಳಿಯು ಕುಲ ಸಂಬಂಧಿಗಳನ್ನು ಷೇರುದಾರರನ್ನಾಗಿ ಸೇರಿಸಿಕೊಳ್ಳುವ ಮೂಲಕ ಒಂದು ಕುಟುಂಬದ ಬ್ಯಾಂಕಿಗೆ ಪರಿವರ್ತಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಡಿ) ಸರ್ಕಾರವು ಈ ಸಂಬಂಧದಲ್ಲಿ ಏನು ಕ್ರಮ ತೆಗೆದುಕೊಳ್ಳಬಹುದು ಅದನ್ನು ದಯವಿಟ್ಟು ನಿಗದಿತ ಕಾಲ ಮಿತಿಯಲ್ಲಿ ತಿಳಿಸಿಕೊಳ್ಳಬೇಕು.

ಶ್ರೀ ಕೆ. ಹೆಚ್. ಪಾಟೀಲ್ (ಸಹಕಾರ ಸಚಿವರು).—

ಎ) ೧೯೮೮ರ ೮ನೇ ವಿಧಾನಸಭೆ ಅಧಿವೇಶನದಲ್ಲಿ ಸಹಕಾರ ಮಂತ್ರಿಗಳು ಭರವಸೆ ಕೊಟ್ಟಿರುವುದು ನಿಜ.

ಬಿ) ಆಶ್ವಾಸನೆ ಬಗ್ಗೆ ಬಂದ ದೂರಿನ ವಿಚಾರಣೆ ಮಾಡಲಾಗಿದೆ, ಶ್ರೀ ಅಶ್ವತ್ಥ್(ಅಶ್ವತ್ಥ್‌ಕುಮಾರ್) ಇವರ ಸದಸ್ಯತ್ವ ಅರ್ಜಿಯನ್ನು ಆಡಳಿತ ಮಂಡಳಿ ತಿರಸ್ಕರಿಸಲ್ಪಟ್ಟಿರುತ್ತದೆ. ಇದರ ಮೇಲೆ ತೊಂದರೆಗೊಳಪಟ್ಟ ಪಕ್ಷಕ್ಕೆ ಸಹಕಾರ ಸಂಘಗಳ ಸಂಯುಕ್ತ ನಿಬಂಧಕರಲ್ಲಿ ಅಪೀಲು ಮಾಡಿರುವುದಿಲ್ಲ.

ಸಿ) ಇಲ್ಲ.

ಡಿ) ಉದ್ಭವಿಸುವುದಿಲ್ಲ.

ವಿಶ್ವನಾಥರೆಡ್ಡಿ ಮುದ್ನಾಳ್ ಆಯೋಗ

೧೧. ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಎ) ಬಸವಣ್ಣನವರ ಐಕ್ಯ ಸ್ಥಳವಾದ ''ಕೂಡಲ ಸಂಗಮ'' ಅಭಿವೃದ್ಧಿಗಾಗಿ ನೇಮಿಸಿದ ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್ ಆಯೋಗದ ವರದಿಯನ್ನು ಸರ್ಕಾರ ಒಪ್ಪಿಕೊಂಡಿರುವುದೆ ?

ಬಿ) ಈ ಆಯೋಗದ ವರದಿಯನ್ನು ಅನುಷ್ಠಾನಕ್ಕೆ ತರಲು ಸರ್ಕಾರವು ಯಾವ ಕ್ರಮವನ್ನು ಕೈಗೊಳ್ಳುವುದು ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಯವರು).—

ಎ) ಹೌದು.

ಬಿ) ಮುದ್ನಾಳ್ ಸಮಿತಿಯು ಶಿಫಾರಸ್ಸಿಗನುಗುಣವಾಗಿ ಕೂಡಲ ಸಂಗಮ ಸಂಕೀರ್ಣದ ನಕ್ಷೆಯನ್ನು ತಯಾರು ಮಾಡಲು ನಿವೃತ್ತ ವಿಶೇಷ ಕಾರ್ಯದರ್ಶಿಗಳಾದ ಶ್ರೀ ಎಸ್. ಜೆ. ಬಾಳೇಕುಂದ್ರಿ ಇವರ ಅಧ್ಯಕ್ಷತೆಯಲ್ಲಿ ಒಂದು ತಾತ್ಕಾಲಿಕ ಸಮಿತಿಯನ್ನು ದಿನಾಂಕ ೫-೫-೧೯೯೦ರ ಸರ್ಕಾರಿ ಆದೇಶದಲ್ಲಿ

ರಚಿಸಲಾಯಿತು. ಈ ತಾಂತ್ರಿಕ ಸಮಿತಿಯು ತಯಾರಿಸಿದ ನಕಾಶೆಗೆ ಸಂಗಮ ಕ್ಷೇತ್ರ ಮತ್ತು ಸಂಕೀರ್ಣದ ಅಭಿವೃದ್ಧಿಯ ಸಮಗ್ರ ಅಂದಾಜಿಗೆ ಅನುಮತಿ ಸಿಗುವವರೆಗೆ ಪ್ರಸ್ತುತ ಸಂಕೀರ್ಣದಲ್ಲಿ ಯಾವುದೇ ಮುಂದಿನ ಕಾಮಗಾರಿಗಳನ್ನು ತೆಗೆದುಕೊಳ್ಳಬಾರದೆಂಬ ನಿಬಂಧನೆಯೊಡನೆ, ದಿನಾಂಕ ೧೯-೭-೧೯೬೮ರ ಸರ್ಕಾರಿ ಆದೇಶದಲ್ಲಿ ಅನುಮೋದನೆ ನೀಡಲಾಯಿತು. ನಂತರ ಮುದ್ನಾಳ್ ಸಮಿತಿಯ ಶಿಫಾರಸ್ಸನ್ನು ಅನುಷ್ಠಾನಕ್ಕೆ ತರಲು ಆಯಾ ಇಲಾಖೆಗಳ ಜವಾಬ್ದಾರಿಯನ್ನು ನಿಗದಿ ಪಡಿಸುವ ಸಲುವಾಗಿ ದಿನಾಂಕ ೧೨-೯-೧೯೬೯ರಂದು ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಲಾಯಿತು. ಈ ಸಭೆಯ ತೀರ್ಮಾನದಂತೆ, ಸಂಬಂಧಪಟ್ಟ ಇಲಾಖೆಗಳು ತಮ್ಮ ವ್ಯಾಪ್ತಿಯೊಳಗೆ ಬರುವ ಅಂಶಗಳನ್ನು ಕಾರ್ಯಗತಗೊಳಿಸುವ ಬಗ್ಗೆ ಸೂಕ್ತ ಅಂದಾಜು ಪಟ್ಟಿಗಳನ್ನು ತಯಾರಿಸಿ, ಅಲ್ಮಟ್ಟಿಯ ಕೃಷ್ಣಾ ಮೇಲ್ದಂಡೆ ಯೋಜನೆಯ ಪ್ರಧಾನ ಇಂಜಿನಿಯರ್‌ರವರಿಗೆ ಕಳುಹಿಸಿ ಕೊಡಬೇಕು. ಪ್ರಧಾನ ಇಂಜಿನಿಯರ್‌ರವರು ಅವುಗಳನ್ನು ಕ್ರೋಢೀಕರಿಸಿ, ನಂತರ ಕ್ರೋಢೀಕರಿಸಿದ ಅಂದಾಜನ್ನು ಸರ್ಕಾರಕ್ಕೆ ಅನುಮೋದನೆಗಾಗಿ ಕಳುಹಿಸಿಕೊಡಬೇಕು. ಮೇಲಿನ ಸಭೆಯು ತೀರ್ಮಾನದಂತೆ, ಆಯಾ ಇಲಾಖೆಗಳು ತಮ್ಮ ವ್ಯಾಪ್ತಿಯ ಅಂಶಗಳ ಅನುಷ್ಠಾನಕ್ಕಾಗಿ ತಮ್ಮ ಖಾತೆಯಿಂದಲೇ ವೆಚ್ಚವನ್ನು ಭರಿಸಬೇಕು. ಮುಂದ್ನಾಳ ಸಮಿತಿಯು ಶಿಫಾರಸ್ಸುಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ವಾರ್ತು ಪ್ರಗತಿಯನ್ನು ನಿಯತಕಾಲಿಕವಾಗಿ ನಿಗಾ ವಹಿಸಿ ಪರಿಶೀಲಿಸಲು, ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಮೇಲ್ವಿಚಾರಕ ನಿರ್ದೇಶನ ಸಮಿತಿಯನ್ನು ದಿನಾಂಕ ೩೦-೬-೧೯೯೦ರ ಸರ್ಕಾರೀ ಆದೇಶದಲ್ಲಿ ರಚಿಸಲಾಗಿದೆ. ಪ್ರಧಾನ ಇಂಜಿನಿಯರ್‌ರವರಿಂದ ಕ್ರೋಢೀಕರಿಸಿದ ಅಂದಾಜಿನ ಪಟ್ಟಿ ಬಂದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಮುಚ್ಚಿರುವ ನೂಲಿನ ಗಿರಣಿಗಳ ಸಂಖ್ಯೆ

೧೧. ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಸಹಕಾರಿ ಕ್ಷೇತ್ರದ ಸ್ವಾಮ್ಯದಲ್ಲಿರುವ ನೂಲಿನ ಗಿರಣಿಗಳ ಸಂಖ್ಯೆ ಎಷ್ಟು ?

ಆ) ಇವುಗಳ ಪೈಕಿ ಎಷ್ಟು ಗಿರಣಿಗಳು ಚಾಲ್ತಿಯಲ್ಲಿ ಇವೆ ?

ಇ) ಮುಚ್ಚಿರುವ ಗಿರಣಿಗಳನ್ನು ಪ್ರಾರಂಭಿಸಲು ಸರ್ಕಾರದವರು ಯಾವ ಕ್ರಮ ಕೈಗೊಂಡಿರುವರು ?

ಈ) ಮುಚ್ಚಿರುವ ಗಿರಣಿಗಳನ್ನು ನಡೆಸಲು ಖಾಸಗಿ ವ್ಯಾಪಾರಸ್ಥರು, ಮುಂದೆ ಬಂದರೆ ಇವುಗಳನ್ನು ನಡೆಸಲು ಅನುಮತಿ ಕೊಡುವ ವಿಚಾರ ಸರ್ಕಾರದ ಮುಂದೆ ಇದೆಯೆ ?

ಉ) ಹಾಗಿದ್ದಲ್ಲಿ, ಯಾವ ಗಿರಣಿಗಳನ್ನು ಖಾಸಗಿಯವರಿಗೆ ನಡೆಸಲು ಕೊಡಲಾಗಿದೆ ಮತ್ತು ಆ ಗಿರಣಿಗಳು ಯಾವುವು ?

ಶ್ರೀ ಕೆ. ಹೆಚ್. ಪಾಟೀಲ್ (ಸಹಕಾರ ಮಂತ್ರಿಗಳು).—

ಅ) ನೋಂದಾಯಿಸಿದ್ದು — ೧೮
ಸ್ಥಾಪನೆಯಾಗಿದ್ದು — ೮

ಆ) ೫

ಇ), ಈ) ಮತ್ತು ಉ) ಬೀಜಾಪುರ ಸಹಕಾರ ನೂಲಿನ ಗಿರಣಿ (ನಿ), ಬೀಜಾಪುರ. ೨) ಬಾಗಲಕೋಟೆ ಸಹಕಾರ ನೂಲಿನ ಗಿರಣಿ ೩) ರಾಯಚೂರು ಸಹಕಾರ ನೂಲಿನ ಗಿರಣಿ (ನಿ), ರಾಯಚೂರು. ಈ ಮೂರು ಮುಚ್ಚಿದ ನೂಲಿನ ಗಿರಣಿಗಳನ್ನು ಪ್ರಾರಂಭಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ